ಶ್ರೀ ಜೆ. ಎಸ್. ದೇಶ್‌ಮುಖ್ (ಅರಣ್ಯ, ಗಣಿ ಹಾಗೂ ಭೂ ವಿಜ್ಞಾನ ಮಂತ್ರಿಗಳು).—

ಅ) ಈ ಕೆಳಕಂಡ ವಿಧಾನಗಳ ಮೂಲಕ ಎಲ್ಲಾ ಅರಣ್ಯ ಉತ್ಪನ್ನಗಳನ್ನು ಮಾರಾಟ ಮಾಡಲಾಗುತ್ತದೆ.

೧. ಮುಖ್ಯವಾಗಿ ಎಲ್ಲಾ ದಿಮ್ಮಿ (ನಾಟ)ಗಳ ಮಾರಾಟ ಹಾಗೂ ಇತರೆ ಅರಣ್ಯ ಉತ್ಪನ್ನಗಳ ಮಾರಾಟವನ್ನು ಸಾಮಾನ್ಯವಾಗಿ ಬಹಿರಂಗ ಹರಾಜು, ಟೆಂಡರ್ ಅಥವಾ ಟೆಂಡರ್-ಕಂ-ಆಕ್ಷನ್ ಮೂಲಕ ಮಾರಾಟ.

೨. ಮಂಜೂರಾದ ಷೆಡ್ಯೂಲ್ ಆಫ್ ರೇಟ್ಸ್‌ಗಳ ಮೇಲೆ ಸರ್ಕಾರಿ ಡಿಪೋಗಳ ಮೂಲಕ ಮಾರಾಟ.

೩. ಮಂಜೂರಾದ ಸೀನಿಯರೇಜ್ ದರಗಳ ಮೇಲೆ ಕೈಗಾರಿಕೆಗಳಿಗೆ ಒದಗಿಸಿ ಕೊಡುವುದರ ಮೂಲಕ.

೪. ಕಿರು ಅರಣ್ಯ ಉತ್ಪನ್ನಗಳನ್ನು ಗೇಣಿ ಆಧಾರದ ಮೇಲೆ ಮಾರಾಟ.

ಆ) ಬೆಳ್ತಂಗಡಿ ತಾಲ್ಲೂಕಿನ ಅರಣ್ಯ ಉತ್ಪನ್ನಗಳನ್ನು ಮಾರಾಟ ಮಾಡುವುದರ ಮೂಲಕ ಸರ್ಕಾರಕ್ಕೆ ಬರುವ ಒಟ್ಟು ರಾಜಸ್ವ ಸುಮಾರು ರೂ. ೫೬,೬೫,೪೫೫.೦೦.

ಹೊಸನಗರದಲ್ಲಿ ವಿದ್ಯುತ್ ಉಪ ವಿಭಾಗ ಕಛೇರಿ ತೆರೆಯುವ ಬಗ್ಗೆ.

೧೫೨೭. ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ಕೈಗಾರಿಕೆ ಮಂತ್ರಿ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹೊಸನಗರದಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಉಪ ವಿಭಾಗ ಮಂಜೂರು ಮಾಡುವ ಯೋಜನೆ ಯಾವ ಹಂತದಲ್ಲಿದೆ;

ಆ) ಶಿವಮೊಗ್ಗ ಜಿಲ್ಲೆಯಲ್ಲಿ ಯಾವ ಯಾವ ತಾಲ್ಲೂಕಿನಲ್ಲಿ ಉಪ ವಿಭಾಗಗಳಿರುವುದಿಲ್ಲ;

ಇ) ಹಾಗಿದ್ದಲ್ಲಿ, ಯಾವ ಕಾರಣಕ್ಕಾಗಿ ಈವರೆಗೆ ಹೊಸನಗರದಲ್ಲಿ ಸ್ಥಾಪಿಸಲಾಗಿಲ್ಲ ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಗಳು).—

ಅ) ಸದ್ಯಕ್ಕೆ ಈ ಯೋಚನೆ ಇಲ್ಲ.

ಆ) ಹೊಸ ನಗರ, ಸೊರಬ ತಾಲ್ಲೂಕುಗಳಲ್ಲಿ ಉಪ ವಿಭಾಗ ಕಛೇರಿಗಳು ಇರುವುದಿಲ್ಲ.

ಇ) ಹೊಸದಾಗಿ ಉಪ ವಿಭಾಗಗಳನ್ನು ತೆರೆಯುವುದನ್ನು ಪ್ರತಿ ಪ್ರಕರಣದ ಕಾರ್ಯಭಾರ ಅವಶ್ಯಕತೆ ಮತ್ತು ಮಂಡಳಿಯ ಆರ್ಥಿಕ ಸ್ಥಿತಿಯನ್ನು ಅವಲಂಬಿಸಿ ನಿರ್ಧರಿಸಲಾಗುವುದು.

ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ಅಂತರ್ಜಲ ಸಂಪನ್ಮೂಲಗಳ ಬಗ್ಗೆ.

೧೯೩೧. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಅರಣ್ಯ, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೋಲಾರ ಹಾಗೂ ಬೆಂಗಳೂರು ಜಿಲ್ಲೆಗಳಲ್ಲಿ ಯಾವ ತಾಲ್ಲೂಕುಗಳನ್ನು ಕಪ್ಪು ಪ್ರದೇಶ ಹಾಗೂ ಬೂದು ಪ್ರದೇಶ ಎಂದು ಸರ್ಕಾರ ಘೋಷಿಸಿದೆ ?

ಆ) ಇನ್ಸಾಟ್ ಉಪಗ್ರಹದ ಸಹಾಯದಿಂದ ಅಂತರ್ಜಲ ಬಗ್ಗೆ ಸರ್ಕಾರದವರು ಸಮೀಕ್ಷೆ ನಡೆಸಿರುವುದು ನಿಜವೆ ?

ಇ) ಹಾಗಿದ್ದಲ್ಲಿ ಇದರ ಫಲಿತಾಂಶವೇನು ?

ಈ) ಅಂತರ್ಜಲ ನಿಕ್ಷೇಪಗಳಿರುವುದು ಈ ಸಮೀಕ್ಷೆ ಮುಖಾಂತರ ಗೊತ್ತಾಗಿದೆಯೇ ?